ಶೋಷಿತ

೨೧ ಡಿಸೆಂಬರ್ ೧೯೭೫ | ಖಾಸಗಿ ಪ್ರಸಾರಕ್ಕೆ | ಸಂಚಿಕೆ : ೨

ಭದ್ರಾವತಿ ಕಾರ್ಖಾನೆಯಲ್ಲಿ ಅಸ್ಪೃಶ್ಯತೆ

(ನಮ್ಮ ವಿಶೇಷ ಪ್ರತಿನಿಧಿಯಿಂದ)

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಭಾರತದ ಪ್ರಮುಖ ಕೈಗಾರಿಕಾ ಕ್ಷೇತ್ರಗಳಲ್ಲಿ ಒಂದು. ಇಲ್ಲಿನ ಸುಮಾರು ಹದಿನೈದು ಸಾವಿರ ಕೂಲಿಗಾರರಲ್ಲಿ ಎರಡೂವರೆ ಸಾವಿರಕ್ಕೂ ಮಿಕ್ಕಿ ದಲಿತ ಕೆಲಸಗಾರರಿದ್ದಾರೆ. ಕಾರ್ಖಾನೆ ಪ್ರಾರಂಭವಾದಂದಿನಿಂದ ಇಲ್ಲಿತನಕ ಕಬ್ಬಿಣ ಉಕ್ಕು ಕೊಟ್ಟರೆ, ಅಧಿಕಾರಿ ವರ್ಗ ಅಸ್ಪೃಶ್ಯತೆ ಯೆಂಬ ಹೇಯ ಶಿಶುವನ್ನು ಉತ್ಪಾದಿಸುತ್ತಿದೆ. ಹಗಲು ರಾತ್ರಿಗಳೆನ್ನದೆ ಇಲ್ಲಿನ ಹತ್ತಾರು ವಿಭಾಗಗಳಲ್ಲಿ ಅದು ತಾಂಡವವಾಡುತ್ತಿದೆ.

ಮುಟ್ಟಿದರೆ ಮುನಿ

ಕಾರ್ಖಾನೆಯ ಕೆಲಸದ ವೇಳೆ ಎಲ್ಲರಿಗೂ ಕಾಫಿ ಕೊಡಲಾಗುತ್ತದೆ. ಆಗ ಯಾವ ದಲಿತನೇ ಆಗಲಿ ಕಾಫಿಯ ಕೆಟಲು, ಲೋಟ, ಬಕೆಟ್ ಇವುಗಳನ್ನು ಮುಟ್ಟುವಂತಿಲ್ಲ. ಮುಟ್ಟಿದರೆ ಛೀಮಾರಿ ಹಾಕಿ ಒದೆಯುತ್ತಾರೆ. ಅತ್ಯಂತ ಶ್ರಮದಾಯಕ ಕೆಲಸಗಳಿಗೆ ಅವರನ್ನ ತಳ್ಳುತ್ತಾರೆ. ಮತ್ತೊಂದು ಬಾರಿ ಮುಟ್ಟಿದರೆ ಸಸ್ಪೆಂಡ್, ಡಿಸ್‌ಮಿಸ್ ಎಂದು ಬೆದರಿಸುತ್ತಾರೆ. ಅದು ಕಂಡು ಇಂತಹ ಕಿರುಕುಳವಾದ್ರೂ ಏತಕ್ಕೆ ಎಂದು ದಲಿತರು ತಮ್ಮ ತಮ್ಮ ಹತ್ತಿರ ಕಾಫಿ ಕುಡಿಯಲು ಪ್ರತ್ಯೇಕ ಲೋಟಗಳನ್ನೇ ಇಟ್ಟುಕೊಂಡಿದ್ದಾರೆ.

ಆದದ್ದು ಹೀಗೆ

ಕಾರ್ಖಾನೆಯ ದಲಿತ ಕೆಲಸಗಾರ ಚಲುವಯ್ಯ ತನ್ನ ಅನುಭವವನ್ನು ಹೀಗೆ ವಿವರಿಸುತ್ತಾನೆ : "೨೬-೭-೭೫ ರಂದು ಬೆಳಿಗ್ಗೆ ಓಪನ್ ಹಾರ್ತ್ ಡಿಪಾರ್ಟ್‌ಮೆಂಟಿನ ಕಾರ್ಪೆಂಟರಿ ವಿಭಾಗದ ಜನರಲ್ ಷಿಫ್ಟ್‌ನಲ್ಲಿ ಲಕ್ಷ್ಮಣ, ಬಸಪ್ಪ ಎಂಬ ಇಬ್ಬರು ಕಾಫಿ ಕುಡಿಯುತ್ತಿದ್ದರು. ಅಲ್ಲಿ ಇನ್ನೂ ನಾಲ್ಕಾರು ಜನ ಇದ್ದರು. ಎಲ್ಲರಂತೆ ನಾನೂ ಕಾಫಿ ಕುಡಿಯಲು ಲೋಟ ಎತ್ತಿಕೊಂಡೆ. ಆಗ ಬಸಪ್ಪನು: 'ಲೋಟ ಮುಟ್ಟಬೇಡ ನೀವು ಹರಿಜನರು. ನಿಮ್ಮನ್ನ ಎಲ್ಲಿ ಇಡ ಬೇಕೊ ಅಲ್ಲೇ ಇಡಬೇಕು' ಎಂದು ಜಗಳಕ್ಕೆ ಬಂದನು. ನಾನು 'ಇದು ಸಾರ್ವಜನಿಕ ಕಾರ್ಖಾನೆ ಇಲ್ಲಿ ನಾವೂ ನಿಮ್ಮ ಹಾಗೆಯೆ' ಎಂದೆ. ಆದಕ್ಕೆ ಬಸಪ್ಪನು 'ಎಲ್ಲಾ ಎ.ಕೆ.ಗಳು ಸುಮ್ಮನಿರು

(೪ನೆಯ ಪುಟಕ್ಕೆ)



ಜೀತಗಾರರಿಗೆ ಆಸ್ತಿ ಒಡೆತನ

ಸರ್ಕಾರ ತನ್ನ ೨೦ ಅಂಶಗಳ ಸೂತ್ರದಲ್ಲಿ ಜೀತ ಪದ್ಧತಿಯನ್ನು ರದ್ದು ಮಾಡಿದ್ದು ಸ್ವಾಗತಾರ್ಹವಾದುದು. ಜೀತದಿಂದ ವಿಮುಕ್ತಿ ಹೊಂದಿದವರು ಇಂದು ಬದುಕುವ ಹಾದಿ ಕಾಣದೆ ಮೂಕರಾಗಿದ್ದಾರೆ. ಅವರ ಮುಂದಿನ ಭವಿಷ್ಯದ ಬಗ್ಗೆ ಸರ್ಕಾರ ಕೆಲವು ಯೋಜನೆ ರೂಪಿಸುವ ಸೂಚನೆಗಳಿವೆ.

ಜೀತ ಮಾಡಿಸಿಕೊಳ್ಳುವವರು ಜಮೀನ್ದಾರರು. ಅಂದರೆ ಜಮೀನನ್ನು ತಾವು ಮಾಡುವ ಶ್ರಮಕ್ಕಿಂತ ಹೆಚ್ಚಿಗೆ ಹೊಂದಿರುವವರು. ಅಥವಾ ಜಮೀನು ಹೊಂದಿದ್ದೂ ಶ್ರಮ ಮಾಡದಿರುವವರು. ಉಳುವವನಿಗೇ ಭೂಮಿ ಎಂದು ಸಾರಿರುವ ಸರ್ಕಾರ, ಬರೀ ವಾರ, ಗುತ್ತಿಗೆ, ಭೋಗ ಮಾಡಿರುವವರಿಗೇ ಜಮೀನು ಕೊಡಿಸುವ ವ್ಯವಸ್ಥೆ ಮಾಡಿದೆ. ಜೀತಗಾರನೂ ಉಳುವವನೇ. ಅಲ್ಲದೆ ಜೀತ ಮಾಡಿಸಿಕೊಳ್ಳುವವನು ತನ್ನ ಅವಶ್ಯಕತೆಗಿಂತ ಹೆಚ್ಚಾಗಿ ಜಮೀನು ಉಳ್ಳವನೇ. ಆದ್ದರಿಂದ ಜೀತಗಾರನಿಗೆ ಜೀತ ಬಿಡಿಸಿದ ನಂತರ, ಜೀತ ಮಾಡಿಸಿಕೊಳ್ಳುತ್ತಿದ್ದವನಿಂದ ಜಮೀನು ಕೊಡಿಸುವುದು ಯೋಗ್ಯ.

ಜೀತ ಬಿಟ್ಟ ಪ್ರತಿಯೊಬ್ಬನೂ ಇಂದು ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಸರ್ಕಾರ ಅವನ ಮುಂದಿನ ಬದುಕಿನ ಬಗ್ಗೆ ಯೋಚಿಸುವಲ್ಲಿ ಮೇಲಿನ ಆಸ್ತಿ ನೀಡಿಕೆ ಹೆಚ್ಚು ಸಹಕಾರಿಯಾಗಬಲ್ಲದು. ಇದರಿಂದ ಜೀತ ಪದ್ಧತಿಯ ನಿರ್ಮೂಲನವೂ ಆಗುವುದಲ್ಲದೆ ಜೀತ ಮಾಡುವ ಪ್ರತಿಯೊಬ್ಬನಿಗೂ ಹಾದಿ ಸಿಕ್ಕಂತಾಗುತ್ತದೆ.

ನಮ್ಮವರೊಂದಿಗೆ ನಾಕು ಮಾತು

ಹೆಸರು ಸಾಕಮ್ಮ. ಊರು ಮೈಸೂರೆ-ಸುಂದ ಅನ್ನಿಸಕೊಳ್ಳುವ ಸಿಟಿ. ಆದರೆ ಸಾಕಮ್ಮನ ಮನೆಯಿರುವ (ಕುಕ್ಕರಹಳ್ಳಿ) ಕಾಲನಿಗೆ ಬಂದು ಗಮನಿಸುತ್ತಾ ನಿಂತರೆ ಇದೂ ಮೈಸೂರೆ? ಎನಿಸುತ್ತೆ. ಹಳ್ಳಕೊಳ್ಳ ಕಸ ಕಲ್ಲುಗಳ ಮಧ್ಯೆ ನಿಂತಿರುವ ಒಂದು ಮನೆಯ ಮುಂದೆ ನಿಂತು "ನಿಮ್ಮ ಜೊತೆ ಸ್ವಲ್ಪ ಮಾತಾಡಬೇಕಿತ್ತು" ಎಂದಾಗ ಸಾಕಮ್ಮನಲ್ಲಿ ಏಕೊ ಒಂದು ರೀತಿಯ ಗುಮಾನಿಯ ಮುಖ ಭಾವನೆ. ನಾವಾಕಿದ್ದ 'ದಿರಿಸು'ಗಳ ಕಂಡು ಹಿಂದೆ ಓಟು ಕೇಳಲು ಬರುತ್ತಿದ್ದವರ ನೆನಪಾಗಿರಬೇಕು.

ಮುವ್ವತ್ತೈದು ದಾಟುತ್ತಿರುವ ಸಾಕಮ್ಮನಿಗೆ ಅವರಿವರ ಮನೆಯಲ್ಲಿ ಪಾತ್ರೆ ಉಜ್ಜುವುದು, ಬಟ್ಟೆ ಒಗೆಯುವುದು, ಕಸಹೊಡೆಯುವುದು ಉದ್ಯೋಗ. ಇದು ಏಳೆಂಟು ವರ್ಷಗಳಿಂದ ನಡೆದು ಬಂದದ್ದು. ಅಕ್ಕತಂಗಿಯರುಗಳಿಗೂ ಇದೇ ಕೆಲಸ. "ಸಂಬಳ"? ಅಂದರೆ "ಹದಿನೈದು" ಅನ್ನುತ್ತಾರೆ. ಗಂಡನಿಗೆ ಸೋಪ್ ಫ್ಯಾಕ್ಟರಿಯಲ್ಲಿ ಕೆಲಸ.

ಇರುವ ಒಂಬತ್ತು ಜನ ಮಕ್ಕಳಲ್ಲಿ ಒಬ್ಬ ಹುಡುಗನನ್ನು ಬಿಟ್ಟರೆ ಯಾರೂ ಓದುತ್ತಿಲ್ಲ. "ಯಾಕೆ ಅವರನ್ನು ಓದಿಸಲಿಲ್ಲ" ಎಂದರೆ "ಅದು ನಮ್ಮಲ್ಲಿ ಎಟಕುತ್ತೆ ಸ್ವಾಮಿ. ಓದೋಕೆ ಸೇರ್ಸಿದ ಮೇಲೆ ಅವರಿಗೆ ಸಿಲೇಟು ಪುಸ್ತಕ, ಬಟ್ಟೆಬರೆ ಎಲ್ಲಿ ತರದು. ಈಗಲೇ ಹಗಲು ಸಂಜೆ ಸರಸತಿಪುರದ ಆಪೀಸರುಗಳ ಮನೇಲೆಲ್ಲ ದುಡಿದರೂ ಅವರ ಹೊಟ್ಟೆ ತುಂಬಿಸೋಕೆ ಸಾಲದಿಲ್ಲ" ಎನ್ನುವ ಸಾಕಮ್ಮನಿಗೆ ಪಿ.ಯು.ಸಿ ಓದುವ ಒಬ್ಬನೇ ಒಬ್ಬ ಹುಡುಗನನ್ನೂ ಬಿಡಿಸಿ ಕೆಲಸಕ್ಕೆ ಹಚ್ಚುವ ಚಿಂತೆ

"ಮೊದಲು ಒಂದಷ್ಟು ಕಷ್ಟ ಆಗುತ್ತೆ ನಿಜ. ಆದರೆ ನಮ್ಜಾತಿಯವರಿಗೆ ಸ್ಕಾಲರ್‌ಶಿಪ್ ಕೊಡೋವಾಗ ಸ್ವಲ್ಪ ಕಷ್ಟವಾದರೂ ಯಾಕೆ ಓದಿಸಬಾರದು" "ಓದಿಸಬೈದು...." ಎಂದು ಉತ್ತರಕ್ಕೆ ಹುಡುಕುತ್ತಾ ಕೂರುವ ಸಾಕಮ್ಮನಿಗೆ, ಈಗ ಓದಿಯೂ ಬೀದಿ ಬೀದಿ ಕೆಲಸವಿಲ್ಲದೆ) ಅಲೆಯುವ ತಮ್ಮ ಕೇರಿಯ ಮೀಸೆ ಬಲಿತ 'ಪೋಲಿಗಳ' ಚಿಂತೆ.

ತನ್ನ ಕೇರಿಯ ಪಕ್ಕದಲ್ಲೆ ಕಣ್ಣಿಗೆ ಪಣ ಪಣ ಅನ್ನುತ್ತಾ ನಿಂತ 'ಸರಸ್ವತಿ ಪುರಂ'ನ ತಾರಸಿ ಮನೆಗಳ ಮತ್ತು ತಾನಿರುವ ಹೊಲಗೇರಿಯ ಹರಕು ಮನೆಗಳ ಮಧ್ಯೆ ಇರುವ ಅಜಗಜಾಂತರಕ್ಕೆ ಕಾರಣ ಏನು? ಎನ್ನುವುದನ್ನು ಊಹಿಸಲಾಗದಷ್ಟು ಮುಗ್ದೆ ಸಾಕಮ್ಮ. ಸರಸ್ವತಿಪುರಂನ ಆಫೀಸರ್ ಮನೆಗಳ ಬಣ್ಣದ ಗೋಡೆಗಳಿಂದ ಮಸಿ ದೂರ ಕುಂತು ಪಾತ್ರೆ ಉಜ್ಜಿ, ಬಟ್ಟೆ ಒಗೆದು, ಕಸ ಹೊಡೆದು ಹದಿನೈದು ರೂ.ಗಳಿಗೆ ಕೈಯೊಡ್ಡುತ್ತಾ ನಿಲುವುದರಲ್ಲಷ್ಟೇ ತನ್ನ ಜೀವನ ಎಂದುಕೊಂಡವರು ಇವರು. ಇದಿಷ್ಟಾದರೂ ಸಲೀಸಾಗಿ ನಡೆಯುವಂತಿದ್ದರೆ ಸಾಕಮ್ಮನಿಗೆ ಚಿಂತೆ ಇರುತ್ತಿರಲಿಲ್ಲ.]

'ನೀವು ಕೆಲಸಕ್ಕಿರೊ ಮನೆಗಳಲ್ಲಿ ನಿಮ್ಮನ್ನ ಯಾವ ರೀತಿ ಕಾಣ್ತಾರೆ?' ಎಂದರೆ 'ಎಲ್ಲನೂ ಸರಿ' ಎನ್ನುವ ಸಾಕಮ್ಮನಿಗೆ ಒಂದೇ ಒಂದು ಆಶ್ಚರ್ಯ ಅಂದರೆ, ತಾವು ಅಡಿಗೆ ಮಾಡೊ ಪಾತ್ರೆ ಉಜ್ಜಿಸ್ತಾರೆ, ತಾವು ಆಕೋ ಬಟ್ಟೆಗಳನ್ನೆಲ್ಲ ಒಗಿಸ್ತಾರೆ, ಮನೆಲೆಲ್ಲ ಕಸ ಹೊಡಿಸ್ತಾರೆ, ಆದ್ರೆ ಅಡಿಗೆ ಮನೆ ಬಾಗಿಲಿಗೆ ಹೋದ್ರೆ ಮಾತ್ರ 'ಥೂ ದೂರ ನಿಲ್ಲೆ' ಅಂತಾರೆ. ಎಲ್ಲನೂ ದೂರ ನಿಂತೇ ಅದ್ ಮಾಡು ಇದ್ ಮಾಡು ಎನ್ನುವಾಗ 'ಕೊಪನೂ ಬತ್ತದೆ' ಎನ್ನುತ್ತಾರೆ ಸಾಕಮ್ಮ.

ಬೇರೆ ಮೇಲ್ಜಾತಿಯವರ ಮನೆಗಳಲ್ಲಿ ಆಗುವ ಈ ಆಶ್ಚರ್ಯಕ್ಕೆ 'ತಾನು ಕೀಳ್ಜಾತಿಯವಳು ಅಲ್ವ?' ಎಂದುಕೊಂಡು ಸಮಾದಾನ ತಂದುಕೊಳ್ಳುವ ಸಾಕಮ್ಮನಿಗೆ, ತಾವು ಕೆಲಸಕ್ಕಿರುವ ತಮ್ಮದೇ ಜಾತಿಯವರ ಮನೆಯಲ್ಲೂ ಇದೇ ಆಶ್ಚರ್ಯ ಉಂಟಾಗುವಾಗ ಸಾಕಮ್ಮನಿಗೆ ದಿಗ್ಭ್ರಮೆ.

'ನಮ್ಮವ್ರೂ ನಮ್ಮ ಸರಿಯಾಗಿ ಕಾಣಕಿಲ್ಲ' ಎನ್ನುವ ಇವರಿಗೆ ಇತ್ತೀಚೆಗೆ ಕಲಿತ ಹಣವಂತರಾದ ತಮ್ಮದೇ ಜಾತಿಯವರ ಮೇಲೆ ಎಳ್ಳಷ್ಟೂ ನಂಬಿಕೆಯಿಲ್ಲ" ಆದರೆ ಬಾಳ ಮಂದಿ ತಮ್ಮಂಗೆ ಕಷ್ಟದಲ್ಲಿ ಬದುಕುವವರಿರುವ ತಮ್ಮ ಕೇರಿಯಲ್ಲಿಯೂ ನಡೆಯುವ ಒಂದಷ್ಟು ಘಟನೆಗಳಿಂದ ದುಃಖ 'ಬಡ್ಡಿ ಸಾಲದ ಕತೆ ನೋಡಾಕಾಗದಿಲ್ಲ, ಎನ್ನುವ ಸಾಕಮ್ಮನೂ ಸಹ ಬಡ್ಡಿ ಸಾಲಕ್ಕೆ ಸಿಕ್ಕಿಕೊಂಡವರು. ಈಗಷ್ಟೇ ಸರಕಾರದಿಂದ ಸಿಕ್ಕ ಸಾಲಹಣದಿಂದ ಬಡ್ಡಿ ಸಾಲ ತೀರಿಸಿ ಹಿಕ್ಕಳದಿಂದ ತಪ್ಪಿಸಿಕೊಂಡಿದ್ದಾರೆ. ಆದರೆ ಇನ್ನು ಮುಂದೆ ಸಾಲಮಾಡದೆ ಬದುಕುತ್ತೇವೆ ಎನ್ನುವ ನಂಬಿಕೆ ಸಾಕಮ್ಮನಿಗಿಲ್ಲ. ಕೇರಿಯ ಪಂಚಾಯ್ತಿಯುವರು ಆಗಾಗ್ಗೆ ಹಾಕುವ ಬಹಿಷ್ಕಾರ, ಗೊತ್ತಿಲ್ಲದೆ ಬಂದುಬಿಡುವ ಹಬ್ಬಹರಿದಿನಗಳು, ಏನೇನೊ ಕೇಳುವ ಮಾರಿ ಮಸಣಿಗಳು, ಇವುಗಳಿಗೆ ಮತ್ತೆ ಮತ್ತೆ ಸಿಕ್ಕಿಕೊಳ್ಳುವ ಸಾಕಮ್ಮನಿಗೆ "ಹಬ್ಬ ಏಕೆ ಮಾಡುತ್ತೀರಿ?" ಎಂದರೆ, ಸ್ವಲ್ಪ ಸಮಯ ಉತ್ತರ ಹೊಳೆಯದೆ, ನಂತರ "ಎಲ್ರೂ ಮಾಡೊವಾಗ ನಾವು ಅಂಗೆ ಇರಕಾದದೆ" ಎನ್ನುತ್ತಾರೆ.

ನಿಮಗೆ ಬಸವಲಿಂಗಪ್ಪ ಗೊತ್ತೆ?

ಯಾರೊ ಗೊತ್ತಿಲ್ಲ ಸ್ವಾಮಿ.

ಕೇಳಿಯೂ ಇಲ್ವ?

ಇಲ್ಲ. ....?!?!

ದಲಿತ ನುಡಿ

ಬಡವರನ್ನು ಕಾಪಾಡದ ದೇವರು ಗರ್ಭಗುಡಿಯಲ್ಲಿದ್ದರೇನು ಚರಂಡಿಯಲ್ಲಿದ್ದರೇನು?

—ಬಿ. ಬಸವಲಿಂಗಪ್ಪ.

ಪ್ರತಿಕ್ರಿಯೆ

ಜೀತ ಮುಕ್ತರಿಗೆ ಹಾದಿ

'ಶೋಷಿತ-೧' ರಲ್ಲಿ ಪ್ರಕಟವಾದ 'ಜೀತ ಪದ್ಧತಿ ರದ್ದು : ಮುಂದೇನು' ಕುರಿತು ಬರೆಯುತ್ತಿದ್ದೇವೆ. ಅಲ್ಲಿ ನೀವು ಜೀತದಿಂದ ಮುಕ್ತರಾದವರಿಗೆ ಯಾವ ಪರಿಹಾರವನ್ನೂ ಸೂಚಿಸದಿರುವುದಕ್ಕೆ ವಿಷಾದಿಸುತ್ತೇವೆ. ಈ ಬಗ್ಗೆ, ನಾನಾ ಊರುಗಳಿಗೆ ಸೇರಿದ ದಲಿತ ವಿದ್ಯಾರ್ಥಿಗಳಾದ ನಾವು, ಚರ್ಚಿಸಿ ಕೆಳಗಿನಂತೆ ನಿರ್ಧಾರ ತೆಗೆದುಕೊಂಡಿದ್ದೇವೆ:

ನಮ್ಮ ಗಮನಕ್ಕೆ ಬಂದ ಅಂಶವೆಂದರೆ, ನಿರ್ಗತಿಕರಾದ ಜೀತದಾಳುಗಳನ್ನು ಜೀತಬಿಡಿಸುವುದೇ ಆದರೆ ಅವರ ಹೊಟ್ಟೆ ಬಟ್ಟೆ ನೆರಳಿಗೆ ಹೊಡೆತ ಬೀಳುವುದರ ಪ್ರಯುಕ್ತ, ಈ ಸಮಸ್ಯೆ ನಮ್ಮ ಕಂಗೆಡಿಸಿದೆ. ನಾಲ್ಕಾರು ಕಡೆ ಇದನ್ನು ಅನುಭವಿಸಿದ್ದೇವೆ. ಈ ಸಮಸ್ಯೆಗೆ ಸಂಬಂಧಿಸಿದಂತೆ ನಡೆಯುತ್ತಿರುವ ಘಟನೆಗಳನ್ನು ಹೇಳುತ್ತಾ ಹೋದರೆ ಲಕ್ಷಗಟ್ಟಲೆ ಆಗಬಹುದು.

ಆದ್ದರಿಂದ ಇಂದಿನ ಪರಿಸ್ಥಿತಿಯಲ್ಲಿ ನಾವು ನಿವೇದಿಸುವುದೇನೆಂದರೆ: ಈಗ ಹಾಲಿ ಸ್ಥಾಪಿಸಲ್ಪಟ್ಟಿರುವ 'ಹರಿಜನ ಗಿರಿಜನ ಹಣಕಾಸು ಸಂಸ್ಥೆ'ಯು ನೀಡುವ ಸೌಲಭ್ಯಗಳು ಸಾಮಾನ್ಯವಾಗಿ ಇಂದಿನ ಕಾಲಮಾನ ಜಾಯಮಾನದ ಸ್ವಭಾವಕ್ಕೆ ತಕ್ಕಂತೆ ನಮ್ಮಂಥ ಓದಿದ ಅಥವಾ ಏಳ್ಗೆ ಹೊಂದಿದವರ ಪಾಲಾಗುತ್ತಿದೆ. ಏನೂ ತಿಳಿಯದೆ ಪಾತಾಳದಲ್ಲಿರುವ ದಲಿತರಿಗೆ ಇದರ ಬಿಸಿಯೂ ತಟ್ಟುವುದಿಲ್ಲ. ಆದ್ದರಿಂದ 'ಹರಿಜನ-ಗಿರಿಜನ ಹಣಕಾಸು ಸಂಸ್ಥೆ' ಅಥವಾ ಇಂಥದೇ ಬೇರೊಂದು ಸಂಸ್ಥೆ, ತಾಲ್ಲೂಕ್ ಅಥವಾ ಹೋಬಳಿಗೊಂದರಂತೆ ಸಣ್ಣ ಪ್ರಮಾಣದ (ಅಲ್ಲಿ ದೊರೆಯುವ ಕಚ್ಚಾವಸ್ತುಗಳಿಗನುಗುಣವಾಗಿ) ಕಾರ್ಖಾನೆಯನ್ನು ತೆಗೆದು, ಅದರಲ್ಲಿ ಪ್ರಧಾನವಾಗಿ ಜೀತದಾಳುಗಳಿಗೆ—ಆಮೇಲೆ ಉಳಿದ ದಲಿತರಿಗೆ—ಉದ್ಯೋಗ ಕಲ್ಪಿಸಿಕೊಟ್ಟರೆ ಹೆಚ್ಚು ಅನುಕೂಲಕರ, ಸೂಕ್ತ ಎಂದು ನಾವು ಭಾವಿಸುತ್ತೇವೆ.

—ದಲಿತ ವಿದ್ಯಾರ್ಥಿಗಳು
ಮೈಸೂರು.

ಅಳಲು

ಸತ್ತರೂ ಸ್ಥಳವಿಲ್ಲ

ನಮ್ಮೂರಲ್ಲಿ ನಾವು ಸತ್ತರೆ ಹೂಳಲೂ ಜಾಗ ವಿಲ್ಲ ಎಂದರೆ ಆಶ್ಚರ್ಯ ಆಗಬಹುದು. ಇದುವರೆಗೆ ಸಾಯುತ್ತಿದ್ದವರನ್ನು ಒಂದು ಕಾಲುವೆ ಏರಿ (ಮಳ್ಳೇರಿ) ಯಲ್ಲಿ ಹೂತಾಕಲಾಗುತ್ತಿತ್ತು. ಆದರೆ ಈಗ ಆ ಏರಿಯೆಲ್ಲ ಹೆಣಗಳಿಂದ ಭರ್ತಿಯಾಗಿ ಈಗ ಸಾಯುವವರನ್ನು ಹೂಳಲು ಜಾಗವಿಲ್ಲ. ಅಗೆದರೆ ಹಳೆ ಹೆಣ ಸಿಕ್ಕುತ್ತವೆ.

ಆದ್ದರಿಂದ ಒಂದು ಸ್ಮಶಾನದ ಜಾಗಕ್ಕಾಗಿ ಸರ್ಕಾರಕ್ಕೆ ಅರ್ಜಿ ಹಾಕಿ ಸುಮಾರು ತಿಂಗಳು ಕಳೆದವು. ತಾಲ್ಲೋಕು ಆಫೀಸಿನಿಂದ ಒಂದಷ್ಟು ಜನ ಬಂದು ಹೊಸ ಜಾಗವನ್ನು ಗುರುತಿಸಿಯೂ ಆಗಿತ್ತು. ಆದರೆ ಸ್ಮಶಾನದ ಜಾಗವನ್ನು ಗುರುತಿಸಿದ ಜಮೀನು ಒಬ್ಬ ಗೌಡನಿಗೆ ಸೇರಿದ್ದು, ಆ ಜಾಗವನ್ನು ಅವನು ಬಿಡಲು ಒಪ್ಪುತ್ತಿಲ್ಲ. ಕೇಳಿದರೆ 'ಸರ್ಕಾರದವರ ಕೇಳಿ' ಅನ್ನುತ್ತಾನೆ. ಸರ್ಕಾರದವರ (ತಾಲ್ಲೂಕು ಆಫೀಸು) ಕೇಳಿದರೆ ಮಾತಿಲ್ಲ. ಈ ಮಧ್ಯೆ ಸತ್ತವರ ಎಲ್ಲಿ ಹಾಕಬೇಕು ಗೊತ್ತಿಲ್ಲ. ಹಳೆಯಜಾಗದಲ್ಲಿ ಹೂತರೆ ಹೆಣಗಳ ಮೇಲೆ ಹೆಣ ಆಗುತ್ತದೆ. ಈ ನಮ್ಮ ಕಷ್ಟ ಸರ್ಕಾರ ಮುಟ್ಟುವುದೆ?

ಸಿದ್ದನಹುಂಡಿ ● ಎಂ. ರಂಗಸ್ವಾಮಿ
ಟಿ. ನರಸೀಪುರ ತಾಲ್ಲೂಕ

★ ★ ★

ಹೋಟೇಲು, ಚಪ್ಪಲಿ, ಹರಿಜನರು

ಮೈಸೂರು ನಗರಕ್ಕೆ ಕೇವಲ ಮೂರು ಮೈಲಿ ದೂರದಲ್ಲಿ ಲಲಿತಾದ್ರಿಪುರ (ಸಕಳ್ಳಿ) ಎಂಬ ಊರಿದೆ. ಸಾಕಷ್ಟು ನಗರೀಕರಣವಾಗಿದ್ದೂ ಸಹ ಈ ಊರಿನಲ್ಲಿ ಅಸ್ಪೃಶ್ಯತೆ ಅಪಾರವಾಗಿದೆ. ಇಲ್ಲಿನ ಹರಿಜನರು ಕಾಲಿನಲ್ಲಿ ಚಪ್ಪಲಿ ಹಾಕಿ ತಿರುಗುವ ಹಾಗಿಲ್ಲ. ಊರಿನ ಇತರ ಜಾತಿ ಜನರ ಬೀದಿಯಲ್ಲೇನಾದರೂ ಹರಿಜನರು ತಿರುಗಾಡಬೇಕಾದರೆ ಕಾಲಿನ ಚಪ್ಪಲಿಯನ್ನು ಕೈಲಿ ಹಿಡಿದು ಮೌನವಾಗಿ ತಲೆತಗ್ಗಿಸಿ ನಡೆಯಬೇಕು. ಹಾಗೇನಾದರೂ ಮಾಡದಿದ್ದರೆ ಅವನ ಮಾನ ಮೂರುಕಾಸಿಗೂ ಲಾಯಕ್ಕಿಲ್ಲದ್ದಾಗುತ್ತದೆ. ಅವನಿಗೆ ಹೊಡೆದು ಬಡಿದು ದಂಡ ಹಾಕಿ, ಬಹಿಷ್ಕಾರ ಹಾಕಿ ರಣರಂಪ ಮಾಡಿಬಿಡುತ್ತಾರೆ.

ಅಲ್ಲದೆ, ಇಲ್ಲಿ ಹರಿಜನರಿಗೆ ಹೋಟೆಲ್ ಪ್ರವೇಶ ಇಲ್ಲ. ಅವರಿಗಾಗೇ ಇರುವ ಸ್ಥಳದಲ್ಲಿ ಕಂಕಟ್ಟಿರುವ ಸಿಲ್ವಾರದ ಲೋಟಕ್ಕೆ ಕಾಫಿ ಹುಯ್ಯಿಸಿಕೊಂಡು ಕುಡಿದು ತೊಳೆದಿಡಬೇಕು. ಹೊಟೆಲ್‌ನವರು ಅವರಿಗೆ ಕಾಫಿ ಹುಯ್ಯುವಾಗ ಎರಡು ಅಡಿ ಎತ್ತರದಿಂದ ಹುಯ್ಯುತ್ತಾರೆ. ಇಂಥ ವ್ಯವಹಾರಗಳು ಲೆಕ್ಕವಿಲ್ಲದಷ್ಟಿವೆ. ಆದರೆ ಯಾರೂ ಇದರತ್ತ ಗಮನ ಹರಿಸಿಲ್ಲ. ನಗರೀಕರಣಗೊಂಡ ಹಳ್ಳಿಯೊಂದರಲ್ಲಿ ಹೀಗಾದರೆ ನಗರ ವಾಸನೆಯನ್ನೂ ಕಾಣದ ಹಳ್ಳಿಗಳಲ್ಲಿನ ದಲಿತರ ಪಾಡೇನು? ಸಂಬಂಧಪಟ್ಟವರು ಇಂಥ ಕೆಟ್ಟ ಆಚಾರ ವ್ಯವಹಾರಗಳತ್ತ ಗಮನ ಹರಿಸದಿದ್ದರೆ ಅನಾಹುತ ಕಟ್ಟಿಟ್ಟದ್ದು.

ನಾಡನಹಳ್ಳಿ ○ ಎನ್. ಸಿ. ಸಿದ್ದರಾಜು
ಮೈಸೂರು ತಾಲ್ಲೂಕು

ಕಾರ್ಖಾನೆಯಲ್ಲಿ ಅಸ್ಪೃಶ್ಯತೆ

(ಮೊದಲ ಪುಟದಿಂದ)

ತ್ತಾರೆ. ಇವನೊಬ್ಬ ಜೋರು ಹೊಡೀತಾನೆ' ಎಂದ.

ಕಾನೂನೆಲ್ಲಿದೆ?

ತರುವಾಯ ಅಂದೇ ಈ ವಿಷಯವನ್ನು ಸೂಪರಿಂಟೆಂಡೆಂಟ್ ಅವರಿಗೆ ತಿಳಿಸಿದೆ. ಅವರು ನೀವು ಹುಟ್ಟಿದಾಗಿನಿಂದ ಇದು ಬಂದಿದೆ. ಅದು ನಿಮ್ಮ ಜಾತಿ ಹಣೆಬರಹ. ಅದನ್ನು ಅಳಿಸೋಕೆ ಆಗುತ್ತ? ಬಂದದ್ದನ್ನು ಅನುಭವಿಸಬೇಕು' ಎಂದರು. ನಾನು ಎಷ್ಟೇ ಕೇಳಿಕೊಂಡರೂ ಅವರಿಗೆ ನನ್ನ ಅಳಲು ಗೊತ್ತಾಗಲೇ ಇಲ್ಲ. ಬಸಪ್ಪನನ್ನು ಕರೆಸಿ, ಅವನು ಮಾಡಿದ್ದೇ ಸರಿ ಎಂಬಂತೆ ನನ್ನೆದುರಿಗೇ ಹೇಳಿದರು. ಕಡೆಗೆ 'ನೀನು ಅರ್ಜಿ ಬರೆಯುತ್ತೀಯಂತೆ. ನಿನ್ನಂಥವರು ಇಲ್ಲಿ ಕೆಲಸ ಮಾಡಬಾರದು. ಕಾನೂನೆಲ್ಲಿದೆ ತೋರಿಸು? ನಿಮಗೆ ಕಾನೂನೊಂದು ಕೇಡು' ಎಂದು ಬೇರೆ ಡಿಪಾರ್ಟ್ಮೆಂಟಿಗೆ ವರ್ಗಾಯಿಸಿರೆಂದು ಬರೆದು ತಂದಿದ್ದ ಅರ್ಜಿಯನ್ನು ಬಿಸಾಡಿ, 'ರ್‍ಯಾಸ್ಕಲ್' ಎಂದು ಬೈದರು. ನಾನು ಶಿವಮೊಗ್ಗ ಡಿ.ವಿ.ಎಸ್. ಸಂಜೆ ಕಾಲೇಜಿನಲ್ಲಿ ಪ್ರಥಮ ಬಿ.ಎ. ಓದುತ್ತಿದ್ದೆ. ಜನರಲ್ ಷಿಫ್ಟ್ ಮುಗಿಸಿಕೊಂಡು ಸಂಜೆ ಕಾಲೇಜಿಗೆ ಹೋಗತ್ತಿದ್ದೆ. ಸೂಪರಿಂಟೆಂಡೆಂಟರು ನನ್ನನ್ನು ರೋಲಿಂಗ್ ಷಿಫ್ಟ್‌ಗೆ ಹಾಕಲು ಹೇಳಿದರು. ನನ್ನ ವಿದ್ಯಾಭ್ಯಾಸ ಹಾಳಾಗುತ್ತೆ ಎಂದು ಪರಿಪರಿಯಾಗಿ ಬೇಡಿಕೊಂಡರೂ ಏನೂ ಪ್ರಯೋಜನವಾಗಲಿಲ್ಲ. 'ಹೋಪ್‌ಲೆಸ್ ಫೆಲೊ' ಅತ೦ ಬಯ್ದು ಕಳುಹಿಸಿದರು. ನನ್ನ ವಿದ್ಯಾಭ್ಯಾಸ ಹಾಳಾಯಿತು."

ದುರಂತ

ಒಂದು ಸಾರ್ವಜನಿಕ ಕಾರ್ಖಾನೆಯಲ್ಲಿ ದಲಿತನಾದ ಕಾರಣಕ್ಕಾಗೆ ಈ ರೀತಿಯ ದಬ್ಬಾಳಿಕೆಗೆ ಒಳಗಾಗಬೇಕಾಗಿರುವುದು ದೊಡ್ಡ ದುರಂತ ಇಂಥವು ಪ್ರತಿ ಸಂಘ ಸಂಸ್ಥೆಗಳಲ್ಲೂ ವಿಪರೀತವಾಗಿವೆ. ಸಂಬಂಧಪಟ್ಟವರು ಇದರತ್ತ ಗಮನ ಹರಿಸದಿದ್ದರೆ ದಲಿತರಸ್ಥಿತಿ ಊಹೆಗೂ ನಿಲುಕದ್ದಾಗಬಹುದು. ●

ದಾಖಲೆಗಳು

೧೯೭೫ ನೇ ಜನವರಿಯಿಂದ ಕನ್ನಡ ದಿನ ಪತ್ರಿಕೆಗಳಿಂದ ಸಂಗ್ರಹಿಸಿದ ದಲಿತರ ಮೇಲೆ ನಡೆದ ದೌರ್ಜನ್ಯದ ಸುದ್ದಿಗಳು-

* ೯-೧-೭೫ : ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಓ. ನಾಗೇಂದ್ರಪ್ಪ ಅವರಿಗೆ ಚಾಕು ಇರಿತ.

* ೧೯-೧-೭೫ : ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಕೋಡೀಹಳ್ಳಿಯಲ್ಲಿ ಸವರ್ಣೀಯರ ದೌರ್ಜನ್ಯದಿಂದ ಗಾಯಗೊಂಡಿದ್ದ ಹುಚ್ಚಯ್ಯ ವಿಕ್ಟೋರಿಯ ಆಸ್ಪತ್ರೆಯಲ್ಲಿ ಸತ್ತ.

* ೧-೨-೭೫, ಕೊಪ್ಪ: ಬೆಳವನ ಕುಡಿಗೆಯಲ್ಲಿ ಸವರ್ಣೀಯರಿಂದ ದೌರ್ಜನ್ಯ.

ಅಹಮದಾಬಾದ್: ಸವರ್ಣೀಯರ ಬಾವಿಯಲ್ಲಿ ನೀರು ಸೇದಿದಕ್ಕಾಗಿ ಕೊಲೆ.

ರಾಜಕೋಟೆ: ಜಾಮ್‌ನಗರದ ಪಕ್ಕ ಧೋಳಿಕೋಟಿ ಗ್ರಾಮದಲ್ಲಿ ದೇವಾಲಯ ಪ್ರವೇಶಿಸಿದ ಬಾಲಕನಿಗೆ ಅರ್ಚಕನಿಂದ ಏಟು –ಸಾವು.

* ೬-೨-೭೫: ಬೆಂಗಳೂರು ಮೆಡಿಕಲ್ ಕಾಲೇಜ್ ಹಾಸ್ಟೆಲ್‌ನಲ್ಲಿ ಸವರ್ಣೀಯ ವಿದ್ಯಾರ್ಥಿಗಳಿಂದ ಹೊಡೆತ.

* ೭-೨-೭೫: ಚಾಮರಾಜ ನಗರದಲ್ಲಿ ಸವರ್ಣೀಯರಿಂದ ಹಲ್ಲೆ.

* ೮-೨-೭೫: ಚಿಕ್ಕಮಗಳೂರು ಜಿಲ್ಲೆ ಎಮ್ಮೆದೊಡ್ಡಿ ಗ್ರಾಮದಲ್ಲಿ ಇಬ್ಬರು ಮಹಿಳೆಯರ ಮೇಲೆ ಅಮಾನುಷ ಅತ್ಯಾಚಾರ.

– ಮುಂದುವರೆಯುವುದು

★ ★ ★

ಪ್ರಕಟಣೆ

'ಶೋಷಿತವು ಪ್ರಕಟಣೆಗಾಗಿ, ದಲಿತರ ಸಮಸ್ಯೆಗಳನ್ನು ಕುರಿತ ವಿಚಾರಾತ್ಮಕ ಲೇಖನ, ಕವನಗಳನ್ನು ಆಹ್ವಾನಿಸುತ್ತದೆ. ಲೇಖನ ಮಾಮೂಲಿ ಬಿಳಿ ಹಾಳೆಯಲ್ಲಿ ಒಂದು ಪುಟಕ್ಕೆ ಮೀರದಂತಿದ್ದು, ಲೇಖಕರ ಪೂರ್ಣ ವಿಳಾಸ ಮತ್ತು ಸಹಿಯನ್ನು ಹೊಂದಿರಬೇಕು. ಕವನ ಆದಷ್ಟು ಚಿಕ್ಕದಾಗಿರಬೇಕು-

—ಸಂಪಾದಕ.



ಕಣ್ ನೋಟ

ಯಾವುದೋ ಒಂದು ದಿನ ಯಾವುದೋ ಒಂದು ಕೆಲಸದ ನಿಮಿತ್ತವಾಗಿ ಕೋರ್ಟಿಗೆ ಹೋಗಬೇಕಿತ್ತು. ಕೋರ್ಟಿನ ಕಾಂಪೌಂಡಿಗೆ ಸೇರಿದಂತೆ ಕೆಲವು ನೆರಳಿನ ಮರಗಳಿವೆ. ಆ ಮರಗಳ ನೆರಳಲ್ಲಿ ಸುಮಾರು ಇಪ್ಪತ್ತು–ಮೂವತ್ತು ಜನ ರೌಂಡಾಗಿ ಕುಳಿತಿದ್ದರು. ಅವರು ದೂರದ ಹಳ್ಳಿಯಿಂದ ಬಂದ ರೈತರು ಎಂಬುವುದನ್ನು ಅವರ ವೇಷ ಭಾಷೆ ತಿಳಿಸುತ್ತಿತ್ತು. ಒಂದು ಬಗೆಯ ಆಕರ್ಷಣೆ ಆಗಿ ಅವರ ಬಳಿ ಹೋಗಿ ಸುಮ್ಮನೆ ನಿಂತೆ.

ಅವರೆಲ್ಲ ಯಾವುದೋ ಒಂದು ಭೂವಿವ್ಯಾಜ್ಯ ಸಲುವಾಗಿ ಕೋರ್ಟಿಗೆ ಅಲೆದೂ ಅಲೆದೂ ಸುಸ್ತಾಗಿದ್ದಂಥ ರೈತರಾಗಿದ್ದರು. ಅವರಲ್ಲಿ ಎಷ್ಟೇ ಕಷ್ಟ ಪಟ್ಟು ಹೀರಿದರೂ ಒಂದು ಹನಿ ರಕ್ತವೂ ಬಾರದೇನೊ ಎಂಬಂತೆ ಒಣಗಿ ಹೋಗಿದ್ದರು. ಬಹಳ ಕೆಟ್ಟದಾಗಿ, ಎರಡು ಒಳಕೆನ್ನೆಗಳನ್ನು ಒಂದಕ್ಕೊಂದು ಅಂಟಿಸಿಕೊಂಡು ಬೀಡಿ ಹೊಗೆ ಎಳೆಯುತ್ತ ಬಿಡುತ್ತ ಬಡಬಡ ಮಾತಾಡುತ್ತಿದ್ದರು. ಮಾತಿನ ಮಧ್ಯೆ ಒಬ್ಬೊಬ್ಬ ತನ್ನ ಒಣಕಲು ದೇಹಕ್ಕೆ ರೋಷತುಂಬಿಕೊಂಡು ಕಣ್ಣಲ್ಲಿ ಬೆಂಕಿ ಉರಿಸುತ್ತ, ಎದ್ದು ನಿಲ್ಲುತ್ತಿದ್ದರೆ ಇನ್ನೊಬ್ಬ ಬಂದು ಅವನನ್ನು ಜಗ್ಗಿ ಎಳೆದು ಕೂರಿಸುತ್ತಿದ್ದನು. ಇದು ಹೀಗೇ ನಡೆಯುತ್ತಿತ್ತು.

ಏನಪ್ಪ ಸಮಾಚಾರ ಎಂಬುದು ಬಹಳ ಹೊತ್ತಾದ ಮೇಲೆ ನನಗೆ ತಿಳಿಯುತ್ತ ಬಂತು. ಅಣ್ಣ-ತಮ್ಮಂದಿರ ನಡುವೆ ಪಾಲಾಗಿರುವ ಆಸ್ತಿಯಲ್ಲಿ ಮೋಸ ನಡೆದಿದ್ದು ಅದಕ್ಕಾಗಿ ಅಣ್ಣ ತಮ್ಮಂದಿರಲ್ಲಿ ಒಮ್ಮತ ಹೋಗಿ ಒಡೆದಾಟ ಆಗಿ ಇವರಿಗೆ ತಕ್ಕಂತೆ ಊರು ಎರಡು ಹೋಳಾಗಿ ಆರೇಳು ವರ್ಷಗಳಿಂದ ಕೋರ್ಟಿಗೆ ಅಲೆದೂ ಏನೂ ಬಗೆಹರಿದಿರಲಿಲ್ಲ. ಈಗ ಅವರ ಹಾಲಿ ಆಸ್ತಿಯನ್ನೆಲ್ಲ ಮಾರಿದರೂ ಅವರ ಕೋರ್ಟು ವ್ಯವಹಾರದ ಸಾಲ ತೀರದಷ್ಟಾಗಿತ್ತಂತೆ! ಅದಕ್ಕಾಗೊ ಅಥವಾ ಬೇಸತ್ತೋ ಏನೊ ಊರ ಜನರು ಇಬ್ಬರಲ್ಲು ರಾಜಿ ಮಾಡಿಯಾರು ಈ ಸಮಸ್ಯೆಯನ್ನು ಬಗೆಹರಿಸಲು ಕೂಡಿದ್ದರು. ಈ ಕೂಡಿಕೆಯಲ್ಲಿ ಒಂದು ವಿಶಿಷ್ಟತೆ ಎಂದರೆ – ಯಾರು ತಪ್ಪಿತಸ್ಥನೊ ಅವನು ತಪ್ಪಿತಸ್ಥ ಎಂಬುದು ನೋಡಿದರೇ ತಿಳಿಯುತ್ತಿತ್ತು. ಆದರೆ ಕೋರ್ಟಿನಲ್ಲಾಗಿದ್ದರೆ ವಾದ-ಪ್ರತಿವಾದಗಳ ನಡುವೆ ತಿಳಿಯುವುದು ಕಷ್ಟವಾಗುತ್ತಿತ್ತು. ಮತ್ತು ತಪ್ಪಿತಸ್ಥನೇ ಮಾತು ಮಾತಿಗೂ ಕೋರ್ಟಿನಲ್ಲೆ ತೀರ್ಮಾನವಾಗಲಿ ಎಂದು ಚಡಪಡಿಸುತ್ತಿದ್ದನು. ಮತ್ತು ಕೋರ್ಟಿನಲ್ಲಿ ಗೆಲ್ಲುವ ಭರವಸೆಯನ್ನು ಅವನು ಹೊಂದಿರುವಂತೆ ಮಾತುಡುತ್ತಿದ್ದನು.

ಇಲ್ಲಿ ಎಲ್ಲಿ ತಪ್ಪಿದೆ? ಜನರಲ್ಲೆ? ಅಥವಾ ಕೋರ್ಟಿನಲ್ಲೆ? ಅಥವಾ ಆಸ್ತಿಯಲ್ಲೆ? ಅಥವಾ ?

—ಕಿಡಿಗೇಡಿ.

ಶರಣಪ್ಪ ಶರಣು ಶರಣು

ನಾ 'ಹೊಲೆಯ' ಅಂತ ತಿಳಿಸಿದ
ನಿಮಗೆ ಶರಣಪ್ಪ ಶರಣು ಶರಣು.
ಹೊಲೆಯನಾದದಕ್ಕೆ ನಾ ಮನುಷ್ಯ!
ಮುಟ್ಟಬೇಡಿರಿ ನೀವು ಪರವಾಗಿಲ್ಲ
ಇರಿ ಇರಿ ಹಂಗೆ ಸರಿಸರಿದು
ಹೊಂಡಿ ಹಿಂದಕ್ಕೆ.
ನಿಮ್ಮ ವೇದಾಂತ ಪುರಾಣ ಕಚ್ಚರುಕತನ
ಧೂಪ ದೀಪ ವಿಭೂತಿ ಬೇಡೆನಗೆ
ಇಟ್ಟುಕೊಳ್ಳಿ ನೀವೇ ಗಂಟುಕಟ್ಟಿ.
ನಿಮ್ಮಿಂದ ದೂರಾಗುವ, ನಿಮ್ಮ
ಮೈ ಚೆಲ್ಲಿಸುವ, ಸಹಕಾರ
ಮಾಡಿರುವಿರಿ, ನನ್ನೊಡಲ ಹಾವು
ಬುಸುಗುಟ್ಟುವಂತೆ ಮಾಡಿದಿರಿ
ನಿಮಗೆ ಶರಣು ಶರಣು!

○'ಮನುಜ'

ಸಂಪಾದಕ : ಇಂದೂಧರ ಹೊನ್ನಾಪುರ
ಪ್ರಕಾಶಕ : ಎಚ್. ಗೋವಿಂದಯ್ಯ
ಸಹಾಯ : ಶಿವಾಜಿ ಗಣೇಶನ್
ಶಿವಮಲ್ಲ ದೇವನೂರ
ವಿಳಾಸ : ೫೧೬, ೧೫ನೇ ಮೇನ್
ಸರಸ ತಿಪುರಂ, ಮೈಸೂರು-೯
ಮುದ್ರಣ : ಆಂದೋಲನ ಮುದ್ರಣ
ಕೆ. ಜಿ ಕೊಪ್ಪಲು, ಮೈಸೂರು-೯

ಟಿಪ್ಪಣಿಗಳು

ಬಹುಪಾಲು ಹರಿಜನರು ಜೀವನಕ್ಕಾಗಿ ಭೂಮಿಯನ್ನು ಆಧರಿಸಿದ್ದಾರೆ. ಅವರಲ್ಲಿ ಭೂಮಿಯ ಒಡೆತನ ಬಹಳ ಮಟ್ಟಿಗೆ ಇಲ್ಲ. ದೇಶದ ಎಲ್ಲಾ ಜನರಿಗಿಂತ ಹರಿಜನರಲ್ಲಿ ಭೂಹೀನರು ಅತಿ ಹೆಚ್ಚು, ಅವರಿಗೇನಾದರೂ ಜಮೀನಿದ್ದರೂ ಅದು ಅಷ್ಟೇನೂ ಫಲಕಾರಿಯಲ್ಲದ, ಸಾರವಿಲ್ಲದ್ದು. 1961ರ ಗಣತಿಯ ಪ್ರಕಾರ ದೇಶದಲ್ಲಿ 3.15 ಕೋಟಿ ಕೃಷಿಕಾರ್ಮಿಕರಿದ್ದರು. ಅವರಲ್ಲಿ 1.04 ಕೋಟಿ ಅಂದರೆ ಶೇ.33 ಜನ ಹರಿಜನರು. 1961ರ ಗಣತಿಯ ಪ್ರಕಾರ ಶೇ. 74 ಹರಿಜನರು 5ಎಕರೆಗಳಿಗಿಂತ ಕಡಿಮೆ ಜಮೀನು ಹೊಂದಿದ್ದರು.

ಹರಿಜನರು ಸಾಗುವಳಿ ಮಾಡುತ್ತಿರುವ ಜಮೀನಿನ ಶೇಕಡವಾರು ಪಟ್ಟಿ.

	೧ ಎಕರೆ ಗಿಂತ ಕಮಿ	೧ - ೨.೪ ಎಕರೆ	೨.೫ - ೪.೯ ಎಕರೆ	೫ - ೯.೯ ಎಕರೆ	೧೦ - ೧೪.೯ ಎಕರೆ	೧೫ ಎಕರೆ
ಇಂಡಿಯ	೨೦.೨೯	೩೦.೮೯	೨೨.೮೨	೧೫.೮೨	೪.೮೨	೫.೨೯
ಕೇರಳ	೬೬.೯೯	೧೬.೪೬	೩.೦೩	೧.೧	೩.೫೪	೦.೨೩
ಕರ್ನಾಟಕ	೮.೪೪	೨೦.೦೦	೧೮.೯೨	೨೧.೫	೧೧.೦೯	೨೦.೦೫

(ಹರಿಜನ ಮತ್ತು ಗಿರಿಜನರ ಬಗೆಗಿನ ಆಯೋಗದ ವರದಿಯಿಂದ - ೧೯೬೬-೬೭)

—ಲಕ್ಷ್ಮಿ